Q.—401. Sri M. RAJASEKHARA MURTHY (Yelandur).—

Will the Government be pleased to state:—

(*a*) whether permits have been issued in favour of Road Transport Department either by the State Transport Authority or by the Regional Transport Authority to operate buses on public roads;

(*b*) the number of routes on which the Government are operating their buses;

(*c*) the number of buses that are being run from Mysore to Nanjangud and onwards;

(*d*) the number of buses that were being run by private operators on Mysore-Nanjangud route prior to creation of monopoly by Government;

(*e*) (i) the bus fare charged in Government buses per passenger travelling between Mysore and Nanjangud, and (ii) the bus fare that was being charged by private operators per passenger travelling from Mysore to Nanjangud?

A.—Sri H. SIDDAVEERAPPA (Minister for Home and Industries).—

(*a*) Yes, by the Regional Transport Authorities of the jurisdictions in which the services ply.

(*b*) 196 routes.

(*c*) 15.

(*d*) 42.

(*e*) (i) Ten annas per passenger.

(ii) Eight annas per passenger.

Q.—428. Sri D. DEVARAJ URS (Hunsur).—

Will the Government be pleased to state:—

(*a*) whether the condition of the buses belonging to Government Transport Company is good;

(*b*) how long these buses last;

(*c*) when they were bought;

(*d*) when the bodies for these buses were built;

(*e*) whether tenders were called for for getting the bodies built;

(*f*) the several companies that gave tenders and the rates they quoted;

(*g*) the cost incurred for building the body of each bus?

A.—Sri H. SIDDAVEERAPPA (Minister for Home and Industries).—

(*a*) 119 buses are in good condition.

(*b*) About 4 to 5 years.

(*c*) 1948 and 1951.

(*d*) 1948 and 1951.

(*e*) Yes.

(*f*) *Vide* Statement II appended to clause (*e*) of question No. 394.

(*g*) *Vide* Statement I appended to clause (*c*) of question No. 394.

Q.—536. Sri B. N. BORANNA GOWDA (Belur).—

Will the Government be pleased to state:—

(*a*) the number of drivers and conductors in the Mysore Government Road Transport at the beginning of 1952.

(*b*) the number of drivers and conductors at the end of 1952;

(*c*) the number newly appointed during this period;

(*d*) the number of drivers and conductors that were dismissed for various reasons?

A.—Sri H. SIDDAVEERAPPA (Minister for Home and Industries).—

	Drivers	*Conductors*
(*a*)	137	132
(*b*)	133	126
(*c*)	6	33
(*d*)	10	39

ಶ್ರೀ ಮುಲ್ಕ ಗೋವಿಂದರೆಡ್ಡಿ.—1948ನೆಯ ಇಸವಿ 12ನೆಯ ತಾರೀಖಿನ ಹೊತ್ತಿಗೆ ಇಲ್ಲ ನಮೂದಿಸಿರುವ ಎಲ್ಲ ಸ್ಥಳಗಳಿಗೂ ಏಜೆಂಟರುಗಳನ್ನು ನೇಮಕಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ; ಆ ರಾಗಾಯಿತಿನಿಂದ ಮಾಡಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರುಗಳ functions ಏನು?

ಶ್ರೀ ಎಚ್. ಸಿದ್ದವೀರಪ್ಪ.—ಟಿಕೆಟ್ ಕೊಡುವುದು, ಪ್ರಯಾಣಿಕರನ್ನು ಬುಕ್‌ಮಾಡಿ ಅನುಕೂಲಮಾಡಿಕೊಡುವುದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರು ಬಸ್ ಸ್ಟ್ಯಾಂಡ್‌ಗಳಲ್ಲಿ ಟಿಕೆಟ್ ಕೊಡುತ್ತಾರೋ ಅಥವಾ ಬೇರೆ ಆಫೀಸ್ ಮಾಡಿಕೊಂಡು ಅಲ್ಲಿ ಟಿಕೆಟ್ ಕೊಡುತ್ತಾರೋ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಗೊತ್ತಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಕೆಲಸಕ್ಕೆ ಅರ್ಹತೆ ಏನಿರಬೇಕು ?

Sri H. SIDDAVEERAPPA.—Necessity and solvency.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಾದರೆ ಅಲ್ಲಿರ ತಕ್ಕವರೆಲ್ಲರೂ Solvent ಎಂದು ಖಚಿತವಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಅವರನ್ನು Solvency Certificate ಇಲ್ಲದೆ ನೇಮಕಮಾಡಿಕೊಳ್ಳುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರು ಬಸ್ ಸ್ಟ್ಯಾಂಡ್‌ನಲ್ಲಿ ಏನೇನು ಕೆಲಸ ಮಾಡುತ್ತಾರೆ ?

Mr. SPEAKER.—ಹೇಳಿದರಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಬಹಳ ಅನುಕೂಲವಿದೆಯೆಂಬುದು ಗೊತ್ತಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. Thank you.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಿದ್ದಮೇಲೆ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಇಷ್ಟೊಂದು ಅನುಕೂಲವಿರುವುದರಿಂದ ಏಜೆಂಟರುಗಳ ಅವಶ್ಯಕತೆಯೇನಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಅವಶ್ಯಕತೆ ಇದೆ. Monopoly bus ಗಳಲ್ಲದೆ ಕೆಲವುಕಡೆ Non-monopoly ಬಸ್‌ಗಳೂ ಇರುತ್ತವೆ. ಟಿಕೆಟ್ಟನ್ನು ಮೊದಲೇ ಬುಕ್‌ಮಾಡಿದ್ದರೆ ಬಸ್ ಬಂದ ಕೂಡಲೆ ಬೇಗ ಎಲ್ಲರನ್ನೂ ಕೂರಿಸಿಕೊಂಡು ಹೊರಟುಹೋಗಬಹುದು. ಇಲ್ಲದೆ ಕಂಡಕ್ಟರೇ ಬುಕ್‌ಮಾಡುವುದಕ್ಕೆ ಹೋಗಬೇಕೆಂದರೆ, time ಇರುವುದಿಲ್ಲ. Booking Agents ಇದ್ದರೆ ಮುಂಚಿತವಾಗಿಯೇ Book ಮಾಡಿಕೊಂಡು ಸಿದ್ಧವಾಗಿರುತ್ತಾರೆ. ಇದು ಒಂದು ಅನುಕೂಲ. ಇನ್ನೊಂದೇನೆಂದರೆ intermediate stationಗಳಲ್ಲಿ ಕಂಡಕ್ಟರೇ ಬುಕ್‌ಮಾಡುವುದರಿಂದ ಸ್ವಲ್ಪಮಟ್ಟಿಗೆ ಹಣದಲ್ಲಿ leakages ಆಗುವುದಕ್ಕೆ ಅವಕಾಶವಿರುತ್ತದೆ. The experience of the department is, that after the appointment of these commission agents, the collections have improved.

ಶ್ರೀ ಮುಲ್ಕ ಗೋವಿಂದರೆಡ್ಡಿ.—Starting Pointನಲ್ಲಿ, ಬಸ್‌ಸ್ಟ್ಯಾಂಡಿಗೆ ಅರ್ಧಗಂಟೆ ಮುಂಚಿತವಾಗಿ ಬಸ್ಸು ಹೋಗಬೇಕೆಂಬ ಅವಶ್ಯಕತೆ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಹಾಗೆಯೇ ರೂಲ್ ಇದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದಕ್ಕೂ ಮುಂಚೆಯೇ ಏಕೆ ಹೋಗಕೂಡದು ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೂ ಮುಂಚೆ ಹೋದರೆ ಅಲ್ಲಿನ ಪೋಲೀಸಿನವನು ಬಿಡುವುದಿಲ್ಲ. ಏಕೆಂದರೆ ರೂಲ್ ಪ್ರಕಾರ ಬಸ್‌ಸ್ಟ್ಯಾಂಡಿಗೆ ಬರಬೇಕಾದರೆ ಹೊರಡುವುದಕ್ಕೆ ಇಪ್ಪೈದು ಗಂಟೆ ಮುಂಚೆ ಬರಬೇಕು ಎಂದಿದೆ. ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೇ ಅಲ್ಲೊಬ್ಬ duty police ಇರುತ್ತಾನೆ. ಒಂದು ನಿಮಿಷ ಹೆಚ್ಚು ಕಡಮೆಯಾದರೂ ಅವನು ಸುಮ್ಮನಿರುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಲ್ಲಕ್ಕಿಂತ ಏಲ್ಲ ಬಸ್‌ಗಳಿಗಿಂತಲೂ priority of timings ಈ ಬಸ್ಸುಗಳಿಗಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವಕ್ಕಿದೆ, ಕೆಲವಕ್ಕಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಕಂಡಕ್ಟರುಗಳೇ ಬುಕ್‌ಮಾಡುವುದರಿಂದ ಇರುವ ತೊಂದರೆಯೇನು ?

ಶ್ರೀ ಎಚ್. ಸಿದ್ದವೀರಪ್ಪ.—ಕಂಡಕ್ಟರುಗಳು ಬುಕ್ ಮಾಡುವುದಕ್ಕೆ ಅಷ್ಟು ಕಾರಾವಕಾಶವಿರುವುದಿಲ್ಲ. ಏಕೆಂದರೆ ಬಸ್‌ಸ್ಟ್ಯಾಂಡಿನಲ್ಲಿ 5 ನಿಮಿಷಗಳಿದ್ದು ಹೊರಡಬೇಕೆಂದರೆ ಜನರೇ ಸಿಕ್ಕುವುದಿಲ್ಲ. We must also run on commercial lines. It is not without reasons that private bus owners employ agents.

ಶ್ರೀ ಮುಲ್ಕ ಗೋವಿಂದರೆಡ್ಡಿ.—Checking Posts ಅಲ್ಲಲ್ಲಿದಲ್ಪಟ್ಟಿವೆ ಅಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಕಂಪೆನಿಯ ಜನರಲ್ ಮ್ಯಾನೇಜರು ಆಗಾಗ್ಗೆ check ಮಾಡುವುದಕ್ಕೆ ಹೋಗುತ್ತಾರೆ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ರೀತಿ ಮಾಡುವಾಗ ಕಂಡಕ್ಟರುಗಳು ಏನಾದರೂ ತಪ್ಪು ಮಾಡಿದ್ದು ಕಂಡುಬಂದರೆ ಡಿಸ್‌ಮಿಸ್ ಮಾಡುತ್ತಾರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಿದ್ದಮೇಲೆ ಬಸ್ ಏಜೆಂಟರುಗಳ ಅವಶ್ಯಕತೆಯೇನು ?

ಶ್ರೀ ಎಚ್. ಸಿದ್ದವೀರಪ್ಪ.—ಹೇಳಿದೆನಲ್ಲಾ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಒಟ್ಟಿನಲ್ಲಿ ಇವರುಗಳಿಗೆ ಎಷ್ಟು ಸಾವಿರ ರೂಪಾಯಿಗಳು ಖರ್ಚಾಗಿವೆಯೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲೇ ಹೇಳಿದೆ; ರೂ. 28,170-12-0.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಏಜೆಂಟರುಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನೂ ಇಲ್ಲೇ ಹೇಳಿದೆ. ಇಬ್ಬರು ಏಜೆಂಟರುಗಳಿದ್ದಾರೆ. ಶೇಕಡಾವಾರು ರೆಕ್ಕದ ಪ್ರಕಾರ ಅವರು ಅಷ್ಟು ರೂಪಾಯಿಗಳ ವ್ಯವಹಾರ ಮಾಡಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರಲ್ಲಿ ಯಾರಾದರೂ ರಾಜಕೀಯ ಮುಖಂಡರ ಶಿಫಾರಸ್ಸಿನ ಮೇರೆ ಮಾಡುತ್ತಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರ ಮೇಲೆ ಏನು ಹತೋಟಿ ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ರೆಕ್ಕಗಳನ್ನು ಸರಿಯಾಗಿ ದಿನವೂ ಒಪ್ಪಿಸಬೇಕು. ಹಣಕಾಸುಗಳನ್ನು ಸರಿಯಾಗಿ ತೆಗೆದುಕೊಂಡು ರಸೀತಿ ಕೊಡಬೇಕು. ಸರಿಯಾಗಿ ಮಾಡದಿದ್ದರೆ ಸಜಾ ಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇನ್ನಾವುದಾದರೂ ರೀತಿಯಲ್ಲಿ ಸರ್ಕಾರದ general control ಅವರ ಮೇಲಲ್ಲವೇ ?

Sri H. SIDDAVEERAPPA.—They are paid agents. They work under the control of the department.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಯಾವುದಾದರೂ ರಾಜಕೀಯ ಪಕ್ಷದ ಪ್ರಭಾವಕ್ಕೊಳಪಟ್ಟವರು ಇಲ್ಲಿ ಕೆಲಸ ಮಾಡುತ್ತಾರಲ್ಲವೆ ?

Sri H. SIDDAVEERAPPA.—They are non-official agents.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಗರ್ನ್ಮೆಂಟ ರೋಡ್ ಟ್ರಾನ್ಸ್‌ಪೋರ್ಟ್‌ನ ಸರ್ವಿಸ್ಸನ್ನುಪಯೋಗಿಸಿಕೊಂಡು ರಾಜಕೀಯದಲ್ಲಿ ಪ್ರವೇಶಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯಾಗಿ ಅವರು ಮಾಡುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ರೀತಿಯಾಗಿ ಅವರು ರಾಜಕೀಯ ಪಕ್ಷಗಳಲ್ಲಿ ಭಾಗವಹಿಸಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

Mr. SPEAKER.—There is the answer to (*f*) 'No'.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರು ಹಾಗೆಗೆ ರಾಜಕೀಯ ಪಕ್ಷಗಳನ್ನು ವಹಿಸಿ ಕೆಲಸ ಮಾಡುತ್ತಾರೆಂಬುದನ್ನು ತಮ್ಮ ಗಮನಕ್ಕೆ ತಂದರೆ, ಪಜೀರ್ ಶ್ಯಾನುಭೋಗರಿಗೆ ಮಾಡಿರುವಂತೆ, ಇವರು ಯಾವ ರಾಜಕೀಯ ಪಕ್ಷದವರೂ ಆಗಿರಕೂಡದೆಂದು ವಿಧಿಸುತ್ತೀರಾ ?

Mr. SPEAKER.—It does not arise out of this.

ಶ್ರೀ ಎಂ. ರಾಜಶೇಖರ ಮೂರ್ತಿ.—ಸರ್ಕಾರದವರು ಇವಕ್ಕೆ ನೇರವಾಗಿ ಟೆಂಡರು ಕರೆದಿದ್ದಾರೆಯೇ ಅಥವಾ ಸ್ಟೋರ್ಸ್ ಪರ್ಚೇಸ್ ಕಮಿಟಿಯು ಮುಖಾಂತರ ಮಾಡಿಸಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—S.P.C. ಯವರು ಕೆಲವಕ್ಕೆ ಟೆಂಡರ್ ಕರೆದಿದ್ದಾರೆ ; ಕೆಲವಕ್ಕೆ ಸರ್ಕಾರದವರೂ ಟೆಂಡರ್ ಕರೆದಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕೆಲವಕ್ಕೆ ಸರ್ಕಾರದವರು ಟೆಂಡರ್ ಕರೆಯುವುದು ಇನ್ನು ಕೆಲವಕ್ಕೆ S.P.C. ಯವರು ಕರೆಯುವುದು ಎಂದರೆ, ಇದೇ ತಮ್ಮ ನೀತಿಯೇ ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಪ್ರಶ್ನೆ ಅರ್ಥವಾಗುವುದಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ಸರ್ಕಾರದವರು ಕೆಲವಕ್ಕೆ ನೇರವಾಗಿ ಟೆಂಡರ್ ಕರೆಯುವುದಕ್ಕೆ ಕಾರಣವೇನು ?

Sri H. SIDDAVEERAPPA.—Stores Purchase Committee tenders have been called for, for the body-building for all the 150 buses and so far as the chasis is concerned Government have purchased it.

ಶ್ರೀ ಎಂ. ರಾಜಶೇಖರಮೂರ್ತಿ.—ಇದನ್ನು ವೃತ್ತ ಪತ್ರಿಕೆಗಳಲ್ಲಿ ಪ್ರಚಾರಪಡಿಸಿದ್ದೆ ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿಸಿದ್ದು.

ಶ್ರೀ ಎಂ. ರಾಜಶೇಖರಮೂರ್ತಿ.—ಇಲ್ಲಿ 'Enquiry' ಎಂದು ಹೇಳಿದ್ದೀರಿ. ಯಾವ ರೀತಿ enquiry ನಡೆಸಿ body ಯನ್ನು ಕಟ್ಟಿಸಲಕ್ಕೆ ಕೊಟ್ಟಿರಿ ?

Sri H. SIDDAVEERAPPA.—That is made clear. Two enquiries were called for, out of which the lowest tender has been accepted.

ಶ್ರೀ ಎಂ. ರಾಜಶೇಖರಮೂರ್ತಿ.—ಇಲ್ಲಿ ಎರಡು enquiryಗಳನ್ನು ಮಾಡಿದೆವೆಂದು ತಿಳಿಸಿದ್ದೀರಿ, ಒಂದು ಮೇ ತಿಂಗಳನಲ್ಲಿ, ಇನ್ನೊಂದು ಫೆಬ್ರವರಿ ತಿಂಗಳಿನಲ್ಲಿ ತಾವು ಯಾವ ಟೆಂಡರಿನಲ್ಲಿರುವ ಪ್ರಕಾರ ಯಾವ ದರದ ಪ್ರಕಾರ ಆರ್ಡರ್ ಕೊಟ್ಟಿರಿ ?

Sri H. SIDDAVEERAPPA.—That which is found to be the lowest.

ಶ್ರೀ ಎಂ. ರಾಜಶೇಖರಮೂರ್ತಿ.—ಯಾವ ಕಂಪೆನಿಯಲ್ಲಿ ಕಟ್ಟಿಸಿದಿರಿ ?

ಶ್ರೀ ಎಚ್. ಸಿದ್ದವೀರಪ್ಪ.—ಉತ್ತರದಲ್ಲೇ ತಿಳಿಸಿದೆ ಇಂತಿಂಥವರು ಮಾಡಿಕೊಟ್ಟಿದ್ದಾರೆ ಎಂದು

ಶ್ರೀ ಎಂ. ರಾಜಶೇಖರಮೂರ್ತಿ.—ನೀವೀಗ ಕೊಟ್ಟಿರುವುದಕ್ಕಿಂತ ಟ್ರಾನ್ಸ್‌ಪೋರ್ಟ್ ಕಮಿಷನ್ ಆಫ್ ಮುದ್ರಾಸ್‌ನವರದು ಕಡಮೆ ಟೆಂಡರಾಗಿರಲಿಲ್ಲವೇ ?

Sri H. SIDDAVEERAPPA.—The Government have considered all these aspects and they have accepted the tender which is cheaper and at the same time more profitable to the department.

ಶ್ರೀ ಎಂ. ರಾಜಶೇಖರಮೂರ್ತಿ.—ಸಿಂಪ್‌ಸನ್ ಕಂಪೆನಿಯವರು ಕೊಟ್ಟಿದ್ದ ಟೆಂಡರಿಗಿಂತ ಟ್ರಾನ್ಸ್‌ಪೋರ್ಟ್ ಕಮಿಷನ್, ಮದ್ರಾಸ್‌ನವರು ಕೊಟ್ಟಿದ ಟೆಂಡರು ಕಡಮೆಯಿಲ್ಲವೇ !

Mr. SPEAKER.—Please see the appendix. That gives the reply.

ಶ್ರೀ ಎಂ. ರಾಜಶೇಖರಮೂರ್ತಿ.—ಆ ಕಾಲದಲ್ಲಿ ಇನ್ನೂ ಬಹಳ ಕಡಮೆ ಬೆಲೆಗೆ ಬಸ್ ಬಾಡಿ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕಡಮೆ ಬೆಲೆಗೆ ಕಟ್ಟಿರುವುದು ಬಂದಿಲ್ಲ. ಈ ವಿಚಾರವನ್ನು ಪ್ರೆಸ್ಸಿನವರು ವೃತ್ತ ಪತ್ರಿಕೆಗಳು, ಇತರ ಪ್ರಾಂತ್ಯಗಳ ಪತ್ರಿಕೆಗಳು, ಎಲ್ಲ ದರಲ್ಲಿ ಪ್ರಕಟಿಸರಾಗಿತ್ತು. Widest publicity has been given, tenders have been called for and the lowest and most profitable for the State has been accepted.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಸಂದರ್ಭದಲ್ಲಿ ಹಣ ದುರುಪಯೋಗವಾಗಿದೆ ಎಂದು ಜನ ಹೇಳುತ್ತಿದ್ದಾರೆ, ಇದಕ್ಕೆ ಆಧಾರವಿದೆಯೋ ಇಲ್ಲವೊ ?

Mr. SPEAKER.—That is no question.

ಶ್ರೀ ಎಂ. ರಾಜಶೇಖರಮೂರ್ತಿ.—ಆಗ ಸಿಂಪ್ಸನ್ ಅಂಡ್ ಕಂಪೆನಿಯ ಮ್ಯಾನೇಜರ್ರು ಲಲಿತ ಮಹಲಿನಲ್ಲಿ ಸ್ಟೇಟ್‌ಗೆಸ್ಟ್ ಆಗಿ ಬಂದಿದ್ದರೆ !

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಂ ರಾಜಶೇಖರಮೂರ್ತಿ.—ಈಗ ಎಷ್ಟು ಬಸ್ಸುಗಳು 'ರನ್ನಿಂಗ್ ಕಂಡಿಷನ್'ನಲ್ಲಿವೆ !

Sri H. SIDDAVEERAPPA.—One hundred and nineteen to be more specific, 27-28 have been reparied, 33 have been condemned.

ಶ್ರೀ ಎಂ. ರಾಜಶೇಖರಮೂರ್ತಿ.—196 ರಸ್ತೆಗಳಿವೆ, ಇವುಗಳಲ್ಲಿ 119 ಬಸ್ಸುಗಳನ್ನು ಹೇಗೆ ಓಡಿಸುತ್ತೀರಿ, ಟೈಮ್ ಷೆಡ್ಯೂರ್ ಹೇಗೆ ಮಾಡಿದಿರಿ, ಈ ದೈವ ಶಕ್ತಿ ಹೇಗೆ ಬಂತು?

ಶ್ರೀ ಎಚ್. ಸಿದ್ದವೀರಪ್ಪ.—ದೈವಶಕ್ತಿಯಿರುವುದರಿಂದಲೇ ಮಾಡುತ್ತಿರುವುದು.

ಶ್ರೀ ಎಂ. ರಾಜಶೇಖರಮೂರ್ತಿ.—33 ಬಸ್ಸುಗಳನ್ನು 'ಕಂಡೆಮ್' ಮಾಡಿರುವಾಗ ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೆ?

Sri H. SIDDAVEERAPPA.—I concede that there is some inconvenience caused to the passengers. It is with a view to obviate that difficulty that thirty new buses are going to be purchased and I am sure that all of them will be put on the line almost within two or three months. You will have to bear kindly with me in the interests of the State.

ಶ್ರೀ ಎಂ. ರಾಜಶೇಖರಮೂರ್ತಿ.—ಖಾಸಗಿ ಬಸ್ಸುಗಳಿಗಿಂತ ಸರ್ಕಾರಿ ಬಸ್ಸುಗಳಲ್ಲಿ ಚಾರ್ಜು ಹೆಚ್ಚೆಂಬುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—Cheap transport ಜನರಿಗೆ ಒದಗಿಸುತ್ತೀವೆಂದು ಹೇಳುತ್ತೀರಿ, ಆ ತತ್ವಕ್ಕೆ ಇದು ವಿರೋಧವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನಮ್ಮ ಅಂತಿಮ ಧ್ಯೇಯ.

ಶ್ರೀ ಎಂ. ರಾಜಶೇಖರಮೂರ್ತಿ.—ಆ ಅಂತಿಮ ಧ್ಯೇಯವನ್ನು ಸಾಧಿಸುವ ಮಾರ್ಗದಲ್ಲಿ ಮುಂದು ವರಿಯುತ್ತಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ರೀತಿ ಮುಂದುವರಿಯುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—Lowest tender accept ಮಾಡದೆ ಇರುವುದಕ್ಕೆ ಕಾರಣವೇನು?

Sri H. SIDDAVEERAPPA.—Sir, tenders will have to be accepted considering the durability of the machine, the time factor within which it will be delivered and also looking into the various requirements. Sometimes a tender may be cheaper, but at the same time, the machine may not be up to the satisfaction. All these things have been considered threadbare by the Government and then they thought fit to accept the tender which has now been accepted in the interests of the State.

Sri D. DEVARAJ URS.—Shall I take it that Government have the discretion either to accept the lowest or the highest tender as the case may be?

Sri H. SIDDAVEERAPPA.—Yes. But definite reasons will have to be assigned if Government accept a slightly higher tender. Government will have to give convincing reasons why it has gone out of its way to accept a higher tender.

ಶ್ರೀ ಡಿ ದೇವರಾಜ ಅರಸ್.—ಚೆಂಡರುಗಳನ್ನು ಕೇಳಿದ್ದು ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂದು ಹೇಳಿದಿರಿ, ಆ ಕಾಲದಲ್ಲಿ ಎಸ್.ಪಿ.ಸಿ. ಇತ್ತೋ ಅಥವಾ ರದ್ದಾಗಿತ್ತೊ?

ಶ್ರೀ ಎಚ್. ಸಿದ್ದವೀರಪ್ಪ.—ಇತ್ತು.

Sri D. DEVARAJ URS.—When was it abolished?

ಶ್ರೀ ಎಚ್. ಸಿದ್ದವೀರಪ್ಪ.—'ಅಬಾಲಿಷ್' ಮಾಡಲಿಲ್ಲ. 1929ರಿಂದಲೂ ಇದೆ.

ಶ್ರೀ ಡಿ. ದೇವರಾಜ ಅರಸ್. ಮಧ್ಯೆ ಅದನ್ನು ರದ್ದುಮಾಡಿರಲಿಲ್ಲವೆ?

Sri H. SIDDAVEERAPPA.—The Committee was reconstituted. Stores Purchase Committee as such is there.

ಶ್ರೀ ಬಿ. ಎನ್. ಬೋರಣ್ಣಗೌಡ.—137 ಜನ ಡ್ರೈವರುಗಳನ್ನೂ 132 ಜನ ಕಂಡಕ್ಟರುಗಳನ್ನೂ ನೇಮಕಮಾಡಿದ್ದೀರಿ. ನೇಮಕಮಾಡುವಾಗ ಅವರಿಗೆ ನೇಮಕಮಾಡಿದ್ದೇವೆಂದು ಒಂದು ಆರ್ಡರ್ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಎನ್. ಬೋರಣ್ಣಗೌಡ.—ಅದರಲ್ಲಿ ಷರತ್ತುಗಳನ್ನೆನಾದರೂ ಹಾಕುತ್ತೀರಾ?

Sri H. SIDDAVEERAPPA.—I want notice. The only condition is that they must serve to the satisfaction of the department.

ಶ್ರೀ ಬಿ. ಎನ್. ಬೋರಣ್ಣಗೌಡ.—ಅವರು ಹೊರಗೆ ಅನುಚಿತವಾದ ರೀತಿಯಲ್ಲಿ ವರ್ತಿಸಿದ್ದಾರೆಂದು ದೂರು ಬಂದರೆ ಅದನ್ನು ಒಂದು ಸಮಿತಿಯ ವಿಚಾರಣೆಗೆ ಕಳುಹಿಸುವುದಾಗಿ ಹೇಳಿದಿರಿ. ಅದು ಯಾವ ಸಮಿತಿ, ಅದರಲ್ಲಿರುವವರು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕಾಗಿಯೇ ಒಂದು ಸಮಿತಿ ಇದೆ. ಅದರಲ್ಲಿ Works Assistant, Gazetted Assistant of the Department ಇರುತ್ತಾರೆ.

Each case will have to be considered on its merits. ಒಬ್ಬನು ಹಣ ತಿಂದಿದ್ದರೆ, ಇನಾಂ ತೆಗೆದುಕೊಂಡಿದ್ದರೆ, ಅಥವಾ moral turpitude ಎಂದು ಹೇಳುತ್ತೇವೆ; ಅಂಥಾದ್ದು ಮಾಡಿದ್ದರೆ, ವಜಾ ಮಾಡಬಹುದು. ಹಾಗಿಲ್ಲದೆ ಸಣ್ಣ ಸಣ್ಣ ತಪ್ಪುಗಳನ್ನು ಮಾಡಿದ್ದರೆ, ಉದಾಹರಣೆಗೆ ರೇಟ್ ಆಗಿ ಬರುವುದು

ಇಂಥ ಕ್ಷಮಾಪಣೆಮಾಡಬಹುದಾದ ತಪ್ಪಾಗಿದ್ದರೆ, ಪುನಃ ಕೆಲಸಕ್ಕೆ ತೆಗೆದುಕೊಳ್ಳಬಹುದೆಂದು ಶಿಫಾರಸುಮಾಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರೀತಿ ವರ್ತಿಸಿದ್ದಾರೆಂದು ಮೇಲಿನ ಅಧಿಕಾರಿಗಳು ವರದಿಮಾಡಿದರೆ, ಅದರ ಮೇರೆ ಕ್ರಮ ತೆಗೆದುಕೊಳ್ಳುತ್ತಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ವರದಿಯ ಮೇರೆ ತೀರ್ಮಾನಮಾಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಯಾವುದಾದರೂ ಕಾರಣದಿಂದ ಅವರಿವರು ದೂರು ಕೊಟ್ಟರೆ ಅದರಮೇರೆ ತೀರ್ಮಾನಮಾಡುವುದೂ ಉಂಟೆ?

ಶ್ರೀ ಎಚ್. ಸಿದ್ದವೀರಪ್ಪ.—ಇಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ; ಬಂದರೆ ವಿಚಾರಣೆಮಾಡುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೆಂಗಳೂರು ಬಸ್ ಸ್ಟ್ಯಾಂಡಿನಲ್ಲಿ ಸರಿಯಾದ ಒಂದು ಬುಕಿಂಗ್ ಆಫೀಸ್ ಇದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ.

Sri S. SRINIVASA IYENGAR.—Are there not many routes which are monopolised?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೆಂಗಳೂರಿನಲ್ಲಿ ಬುಕಿಂಗ್ ಆಫೀಸ್ ಇದ್ದರೂ ಕೂಡ ಏಜೆಂಟುಗಳೇಕೆ?

Sri H. SIDDAVEERAPPA.—They canvass tickets also.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನನ್ನ ಪ್ರಶ್ನೆಯೇನೆಂದರೆ, ಮೊನಾಪಲಿ ಇರುವಾಗ, ಬೇರೆ ಯಾವ ಬಸ್ಸುಗಳೂ ಹೋಗುವುದಿಲ್ಲ ಆ ರಸ್ತೆಗಳಲ್ಲಿ. ಹೀಗಿರುವಾಗ ಏಜೆಂಟುಗಳೇಕೆ?

Sri H. SIDDAVEERAPPA.—I will have to make a statement in this connection. There seems to be an impression that these agents are not necessary. As a matter of fact, it is the Government that have insisted on the appointment of these agents, because after experience Government have come to realise that when there are agents, there will be lesser room for pilfering on the way.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೇರೆ ಸ್ಟ್ಯಾಂಡುಗಳಲ್ಲಿರುವ ಏಜೆಂಟುಗಳ ವಿಚಾರವಲ್ಲ, ಬೆಂಗಳೂರಿನಲ್ಲಿ ಬುಕಿಂಗ್ ಆಫೀಸ್ ಇದ್ದರೂ ಏಜೆಂಟರು ಏಕೆ ಎಂಬುದು ನನ್ನ ಪ್ರಶ್ನೆ.

ಶ್ರೀ ಎಚ್. ಸಿದ್ದವೀರಪ್ಪ.—ಅನೇಕರಿಗೆ ಗೊತ್ತಿರುವುದಿಲ್ಲ. ಆಗ ಇವರು ಇದ್ದರೆ, ಅನುಕೂಲವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—Simpson & Co, ಅವರು ಮದರಾಸಿನಲ್ಲೇ ಡೆಲಿವರಿ ಕೊಡುತ್ತೇವೆ, ತೆಗೆದುಕೊಳ್ಳಬೇಕೆಂದು ಹೇಳಿದರೆ, ಹೇಗೆ ಒಪ್ಪಿದಿರಿ?

Sri H. SIDDAVEERAPPA.—I have already said that Government have considered all the aspects and have come to the conclusion that the bargain struck is better from the standpoint of the State.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮದರಾಸಿನಿಂದ ಅವರ ಕಾರ್ಖಾನೆಯಿಂದ ಬೆಂಗಳೂರಿಗೆ ಬಸ್ಸುಗಳನ್ನು ತರುವುದಕ್ಕೆ ಖರ್ಚು ಯಾರು ಕೊಟ್ಟರು?

Sri H. SIDDAVEERAPPA.—I want notice.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—1948ರಲ್ಲಿ 150 ಬಸ್ಸುಗಳನ್ನು ತೆಗೆದುಕೊಂಡಾಗ ಬಾಡಿ ಕಟ್ಟುವುದಕ್ಕೆ ಒಟ್ಟು ಎಷ್ಟು ಹಣ ಕೊಟ್ಟದ್ದು?

Sri H. SIDDAVEERAPPA.—(After searching the files) I will give you the answer in a minute. You please put the next question.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ತಮ್ಮ ಉತ್ತರದಲ್ಲಿ ಇದಕ್ಕೆ 5 ವರ್ಷ ಮಾತ್ರ ಜೀವ ಎಂದು ಹೇಳಿದ್ದೀರಿ.....

Mr. SPEAKER.—The question has been answered day before yesterday. Why do you repeat the same question.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—1948ನೆಯ ಇಸವಿಯಲ್ಲಿ ಕೊಂಡುಕೊಂಡ ಬಸ್ಸುಗಳು 1953ನೆಯ ಇಸವಿಯಲ್ಲಿ ಪೂರ್ತಿ ಕೆಲಸಕ್ಕೆ ಬರುವುದೆಂದು ಅರ್ಥವಾಗುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—1948ನೆಯ ಇಸವಿಯಲ್ಲಿ ಕೊಂಡದ್ದು. They have already earned their full depreciation value. I have made the position very clear so often.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ, 150 ಬಸ್ಸುಗಳಿಗೂ ಕೊಟ್ಟ ಹಣ, ಬಾಡಿ ಕಟ್ಟುವುದಕ್ಕೆ ಕೊಟ್ಟ ಹಣ, ಎಲ್ಲಕ್ಕೂ ಡಿಪ್ರೀಸಿಯೇಷನ್ ಕಟ್ಟಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪೂರ್ತಿಯಾಗಿ ತೆಗೆದುಕೊಂಡಿದೆ. ಸುಮಾರು 25 ಲಕ್ಷ ರೂಪಾಯಿಗಳು ಬಂದಿವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—1953-54ರಲ್ಲಿ 15 ಲಕ್ಷ ಒದಗಿಸಿದೆಯೆಂದು ಹೇಳಲಲ್ಲವೆ?.....

Mr. SPEAKER.—Last week it was furnished.

ಶ್ರೀ ಎಚ್. ಸಿದ್ದವೀರಪ್ಪ.—ಹಿಂದಿನ ಪ್ರಶ್ನೆಗೆ ಈಗ ಉತ್ತರ ಹೇಳುತ್ತೇನೆ. We have paid during 1948-49 and 1949-50 a sum of Rs. 12,48,928-1-0 for chassis, and bus body building. ಡಿಪ್ರೀಸಿಯೇಷನ್ನಿಗೆ ಸುಮಾರು 20 ಲಕ್ಷಕ್ಕಿಂತ ಹೆಚ್ಚಾಗಿ ತೆಗೆದಿದೆ. ಈಗ ತಾನೇ ಅಧ್ಯಕ್ಷರು ಅರ್ಪಣೆಕೊಡಿಸಿದ ಹಾಗೆ, 30 ಬಸ್ಸುಗಳನ್ನು ಹೊಸದಾಗಿ ತರಿಸಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ತಾವು ಒಂದು ಕಡೆ 47 ಜನರನ್ನು ಡಿಸ್‌ಮಿಸ್ ಮಾಡಲಾಯಿತೆಂದು ಮತ್ತೊಂದು ಕಡೆ 81 ಜನರೆಂದೂ ಹೇಳಿದ್ದೀರಿ. ಇದರಲ್ಲಿ ಯಾವುದು ನಿಜ? ಎಷ್ಟು ಜನರು ಖಂಡಿತವಾಗಿ ಡಿಸ್‌ಮಿಸ್ ಆಗಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ —ಮೊದಲು ಅಪಾಯಿಂಟ್ ಆಗಿದ್ದವರ ಪೈಕಿ 47 ಜನ. ಇತ್ತೀಚೆಗೆ ಕೆಲವರು ಅಪಾಯಿಂಟ್ ಆಗಿದ್ದಾರೆ. ಅವರಲ್ಲಿ ಕೆಲವರನ್ನು ತೆಗೆದು ಹಾಕಿರುವ ಬಗ್ಗೆ ಆ ರೀತಿ ತಿಳಿಸಲಾಗಿದೆ.

Government have ordered for the appointment of agents for intermediate stations only in the month of November 1952. From that time onwards, very many have been appointed.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ತಮ್ಮ ರೇಟೆಸ್ ಲಸ್ಟ್‌ಪ್ರಕಾರ ಅವರು 81 ಜನರಾಗುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟು ಆಗಬಹುದು.

ಶ್ರೀ ಎಸ್. ಗೋಪಾಲಗೌಡ.—ಏಜೆಂಟರುಗಳಿಂದ ಡಿಪಾಜಿಟ್ ತೆಗೆದುಕೊಳ್ಳಬೇಕೆಂಬ ನಿಯಮವನ್ನು ಏನಾದರೂ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಸಾರ್ವೆಸಿ ಸರ್ಟಿಫಿಕೇಟನ್ನು ಕೊಟ್ಟು ಜೊತೆಗೆ 50 ರೂಪಾಯಿಗಳ ಡಿಪಾಜಿಟ್ ಸಹ ಕೊಡಬೇಕೆಂಬ ನಿಯಮವನ್ನೇ ಮಾಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಮನಾಪಲ ರೂಟ್‌ಗಳಲ್ಲಿ ಕೂಡ ಅಂಥಾ ಏಜೆಂಟರಿಗೆ ಅವಶ್ಯಕತೆ ಇದೆಯೇ ?

Mr. SPEAKER.—That question was put already.

Sri K. S. VASAN.—What was the necessity to accept the revised tender with an additional sum of Rs. 453 in the case of Messrs. Simpson & Co. ?

Sri H. SIDDAVEERAPPA.—I have already replied that question. I have already submitted for the consideration of the House the principles involved while accepting a tender.

Sri K. S. VASAN.—If there are certain circumstances for accepting a revised tender, will it go before a Committee for examination or will the Minister himself consider it ?

Sri H. SIDDAVEERAPPA.—Normally it goes before a Committee.

ಶ್ರೀ ಎಸ್. ಎಂ. ಮರಿಯಪ್ಪ.—ತಮ್ಮ ಮನಾಪಲ ರೂಟ್ಸ್‌ಗಳಲ್ಲಿ ಎಷ್ಟು ಜನ ಟ್ರಾಫಿಕ್ ಸೂಪರ್‌ವೈಜರುಗಳಿರುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಎಂ. ಮರಿಯಪ್ಪ.—ಓವರ್ ರೋಡ್ ಮಾಡಬೇಕೆಂಬುದಾಗಿ ತಾವೇ ಅವರಿಗೆ ಸೂಚನೆ ಕೊಟ್ಟಿದ್ದೀರಾ?

ಅಧ್ಯಕ್ಷರು.—ಈ ಪ್ರಶ್ನೆಗೆ ನಿನ್ನೆಯ ದಿವಸವೇ ಉತ್ತರ ಕೊಡಲಾಗಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ರೋಡ್ ಟ್ರಾಫಿಕ್ ಬಸ್ಸುಗಳಲ್ಲಿ ಜನಸಂಚಾರ ಕಡಮೆಯಾಗುತ್ತಿದೆಯಲ್ಲವೇ ?

ಅಧ್ಯಕ್ಷರು.—ಈ ಪ್ರಶ್ನೆಗೂ ನಿನ್ನೆಯ ದಿವಸವೇ ಉತ್ತರ ಕೊಡಲಾಗಿದೆ.

ಶ್ರೀ ಎಂ. ಲಿಂಗಣ್ಣ.—ಈ ರೋಡ್ ಟ್ರಾನ್ಸ್‌ಪೋರ್ಟ್ ಲೈನಿನಲ್ಲಿ 47 ಬುಕ್ಕಿಂಗ್ ಆಫೀಸುಗಳಿರುತ್ತವೆಯೇ ?

Sri H. SIDDAVEERAPPA.—They may not be having a regular office as such with a board and all that.

ಬಸ್ ಸ್ಟ್ಯಾಂಡಿನಲ್ಲಿ ನಿಂತು ಕೊಂಡಿರುತ್ತಾರೆ ಸರ್ಕಾರಿ ಬಸ್ ಹತ್ತಿ ಎಂದು ಹೇಳುತ್ತಾರೆ.

ಶ್ರೀ ಎಂ. ಲಿಂಗಣ್ಣ.—ಅವರು ಅವರ ಮನೆಗಳ ಹತ್ತಿರದಲ್ಲೇ ಈ ಆಫೀಸುಗಳನ್ನು ಮಾಡಿಕೊಂಡಿದ್ದಾರೋ ಅಥವಾ ಬಸ್‌ಸ್ಟ್ಯಾಂಡಿಗೆ ಬಂದು ಕೆಲಸ ಮಾಡುತ್ತಿದ್ದಾರೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಎರಡು ಕಡೆಗಳಲ್ಲೂ ಕೆಲಸಮಾಡುತ್ತಾರೆ.

ಶ್ರೀ ಬಿ. ರಾಚಯ್ಯ.—ಗುಂಡ್ಲುಪೇಟೆಯಿಂದ ಮೈಸೂರಿಗೆ ಬರತಕ್ಕ ರಸ್ತೆಯನ್ನು ಮನಾಪಲಮಾಡಿಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಆ ರೂಟಿನಲ್ಲಿ ಖಾಸಗೀ ಬಸ್ಸಿನವರಿಗೂ ದಿನ ಬಿಟ್ಟು ದಿನ ಬಸ್ಸನ್ನು ಓಡಿಸಲು ಅವಕಾಶ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಟ್ಟಿದ್ದೇವೆ.

Expenditure on food control.

Q.—393. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the total amount of expenditure (with particulars) incurred by the Government towards the food control in the State during the current year and the last year ;

(*b*) whether they received any grant or help from the Centre ;

(*c*) if so, in what form and to which extent ?

A.—Sri H. SIDDAVEERAPPA (Minister for Home and Industries).—

		Current year 1952-53 Rs.	*Last year* 1951-52 Rs.
(*a*)	(i) On Food Subsidy	15,55,000	29,59,486
	(ii) Expenditure on establishment (Budgeted).	32.79,472	37,82,648
(*b*)	.. ..	Nil	Yes
(*c*)	.. ..	Nil	By credits to our account, being subsidy on the subsidised quantity of supply. Rs. 66,36,842